ರೋಮನ್ ಸಾಮ್ರಾಜ್ಯದ ಅವಶೇಷಗಳು ರೋಮಿನಲ್ಲಿ ಮಾತ್ರವಲ್ಲ, ಜಗತ್ತಿನ ಪ್ರಾಚೀನ ನಗರಗಳಾದ ಹೈಫಾ, ಜೆರುಸಲೇಂ, ಮಿಲಾನ್, ಇಸ್ತಾಂಬುಲ್, ಜೆರುಸಲೇಂ ಮೊದಲಾದ ರೋಮನ್ ನಗರಗಳಲ್ಲೂ ಇವೆ. ಸಾಮಾನ್ಯವಾಗಿ ಅಧಿಕಾರ ಕೇಂದ್ರಗಳು ಧಾರ್ಮಿಕ ಯಾತ್ರಾಸ್ಥಳಗಳೂ ವ್ಯಾಪಾರಿ ತಾಣಗಳೂ ಚಿತ್ರ ,ಶಿಲ್ಪ, ಸಂಗೀತ, ಸಾಹಿತ್ಯ, ವಾಸ್ತುಶಿಲ್ಪವೇ ಮೊದಲಾದ ಲಲಿತಕಲೆಗಳ ಪ್ರಯೋಗಭೂಮಿಗಳೂ ಆಗುತ್ತವೆ. ನಮ್ಮಲ್ಲಿ ದೆಹಲಿ, ಬನಾರಸ್, ವಿಜಯನಗರಗಳು ಹೀಗೆ ಧರ್ಮ, ಜ್ಞಾನಸಾಧನೆ, ವ್ಯಾಪಾರ, ಕುಶಲಕಲೆಗಳು ಏಕೀಭವಿಸಿದ್ದ ಪ್ರಾಚೀನ ಶಹರಗಳು. ಆಧುನಿಕ ಕಾಲದಲ್ಲಿ ಈ ಚಹರೆಗಳು ಬರೋಡ, ಮೈಸೂರು, ಮುಂಬೈ, ಬೆಂಗಳೂರು, ಕೊಲ್ಕೊತ್ತ, ಪುಣೆ, ಲಖನೊಗಳಲ್ಲಿ ಮುಂದುವರೆದವು.

ರೋಮ್ ನಗರವನ್ನು ಭೂಮಂಡಲದ ಕೇಂದ್ರವೆಂದು ಭಾವಿಸಲಾಗಿತ್ತು. ಅದಕ್ಕೆ ಸಾಕ್ಷ್ಯವೆಂಬಂತೆ ಅಲ್ಲಿ, ಜಗತ್ತಿನ ಬೇರೆ ನಗರಗಳಿಗೆ ಹೋಗುವ ದಿಕ್ಕು ಮತ್ತು ಫಾಸಲೆ ಸೂಚಿಸುವ ಕೈಮರಗಳಿವೆ. 'ಆಲ್ ರೋಡ್ಸ್ ಲೀಡ್ ಟು ರೋಮ್' ಹೇಳಿಕೆ ಹುಟ್ಟಿದ್ದು ಲೋಕದ ಕೇಂದ್ರವಾಗುವ ತುಡಿತದಿಂದಲೇ. ಆದರೆ ಯಾವುದೇ ಶಹರವು ಜಗತ್ತಿನ ಕೇಂದ್ರವಾಗಬಾರದು; ಲೋಕದ ರಸ್ತೆಗಳೆಲ್ಲ ತನ್ನತ್ತ ಬರಬೇಕೆಂದು ಆಹ್ವಾನಿಸಲೂಬಾರದು. ಯಾಕೆಂದರೆ, ಹೊರಗಿಂದ ಬರುವವರು ಹೊಸ ಸರಕು ಮತ್ತು ಜ್ಞಾನವನ್ನು ಮಾತ್ರವಲ್ಲ, ಹೊಸ ಯುದ್ಧ ಮತ್ತು ಬೇನೆಗಳನ್ನೂ ತರುವರು. ಜೆರುಸಲೇಂ, ಇಸ್ತಾಂಬುಲ್, ರೋಮ್, ವೆನಿಸುಗಳು ಈಗಲೂ ಪ್ರವಾಸಿಗರ ಸಂತೆಗಳು. ನಗರಗಳಿಗೆ ಜೀವ ಬರುವುದೇ ವಣಿಕರಿಂದ, ಕೊಳ್ಳುಬಾಕರಾದ ಪ್ರವಾಸಿಗರು ಮತ್ತು ಯಾತ್ರಿಕರಿಂದ. ಈ ಪ್ರವಾಸಿಗ ಸಂತೆಗಳಿಗೆ ಹೋಲಿಸಿದರೆ ಗದ್ದಲವಿಲ್ಲದ ಸ್ಲೊವೇನಿಯಾ, ಕ್ರೊಶಿಯಾದಂತಹ ಪುಟ್ಟದೇಶಗಳ ನಿಸರ್ಗ ಹಿತವಾಗುತ್ತದೆ. ಅಲ್ಲೂ ರೋಮನ್ ಸಾಮ್ರಾಜ್ಯದ ಕಾಲದಲ್ಲಿ ನಿರ್ಮಾಣಗೊಂಡ ಝಗ್ರೆಬ್, ಸ್ಪ್ಲಿಟ್, ದುಬ್ರೊವ್ನಿಕ್ ಮೊದಲಾದ ನಗರಗಳಿವೆ. ಆದರೆ ಅವನ್ನು ಗುಲಾಮಗಿರಿಯ ಸಂಕೇತಗಳೆಂದು ಭಾವಿಸಿರುವ ಅವು, ತಮ್ಮ ಗಿರಿ–ವನ, ಕೊಳ–ಗುಹೆಗಳನ್ನು ತಮ್ಮ ಅಸ್ಮಿತೆಗಳೆಂದು ಪ್ರವಾಸಿಗರ ಮುಂದಿಡುತ್ತಿವೆ.

ಸಾಮ್ರಾಜ್ಯಗಳ ಸಮಸ್ಯೆಯೆಂದರೆ, ಸಾಮ್ರಾಟನ ಧರ್ಮವನ್ನು ಎಲ್ಲರ ಮೇಲೂ ಹೇರುವುದು. ಕಲೋಸಿಯಂ ಒಳಗೊಂಡಂತೆ, ರೋಮನ್ ಅವಶೇಷಗಳಲ್ಲಿ ಹಲವು ಧರ್ಮಗಳ ಕುರುಹುಗಳು ಒಟ್ಟಿಗೇ ನೆಲೆಸಿವೆ – ಕಾಲಕಾಲಕ್ಕೆ ನಡೆದ ಅಧಿಕಾರಸ್ಥ ಧರ್ಮಗಳ ಹೇರಿಕೆ ಮತ್ತು ನಾಶಗಳ ಪುರಾವೆಗಳಾಗಿ. ಧರ್ಮವು ಪ್ರಭುತ್ವದ ಭಾಗವಾದರೆ ಆಕ್ರಾಮಕ ಗುಣವನ್ನು ಪಡೆಯುತ್ತದೆ. ರೋಮಿನ ಚರ್ಚುಗಳಲ್ಲಿ, ಹಿಂದೊಮ್ಮೆ ರೋಮ್ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಇಸ್ತಾಂಬುಲ್‌ನ ಮಸೀದಿ ಮತ್ತು ಚರ್ಚುಗಳಲ್ಲಿ, ರಾಜವೈಭವದ ಛಾಯೆಯಿದೆ. ಚಕ್ರವರ್ತಿಗೆ ಸಮನಾದ ಅಧಿಕಾರ ಪಡೆದಿರುವ ವ್ಯಾಟಿಕನ್ನಿನ ಪೋಪರ ಅರಮನೆ, ಹೈದರಾಬಾದಿನ ಸಾಲಾರ್‌ಜಂಗ್ ಸಂಗ್ರಹಾಲಯದಂತೆ, ಚಿತ್ರಕಲಾಶಾಲೆಯೂ ವಸ್ತುಸಂಗ್ರಹಾಲಯವೂ ಆಗಿದೆ. ಧರ್ಮ ಮತ್ತು ಪ್ರಭುತ್ವಗಳ ಈ ಏಕೀಕರಣದ ಪರಿಣಾಮವನ್ನು ರೋಮನ್ ಸಾಮ್ರಾಜ್ಯ ಹರಡಿದ್ದ ಎಲ್ಲ ದೇಶಗಳಲ್ಲೂ ಕಾಣಬಹುದು. ರೋಮನ್ ಚಕ್ರವರ್ತಿ ಇಸ್ತಾನ್‌ಬುಲ್‌ನಲ್ಲಿ ಕಟ್ಟಿಸಿದ ಸೋಫಿಯಾ ಚರ್ಚು ಮಸೀದಿಯಾಯಿತು. ಕ್ರೊಶಿಯಾದಲ್ಲಿ ರೋಮನ್ನರ ಜ್ಯುಪಿಟರ್ ಮಂದಿರವು ಸಂತಜಾನ್ ಚರ್ಚಾಯಿತು. ರೋಮನ್ ದೇವತೆಗಳ ಕುರುಹುಗಳನ್ನು ನಿವಾರಿಸಿ ಮಾಡಲಾದ ಕ್ರೈಸ್ತೀಕರಣವನ್ನು ಗೈಡುಗಳು 'ಲೀಗಲೈಜೇಶನ್ ಆಫ್ ಕ್ರಿಶ್ಚಿಯಾನಿಟಿ' ಎಂದು ವಿವರಿಸುವರು. ಈ ಕ್ರೈಸ್ತೀಕರಣವು ಕಲೋಸಿಯಮ್ಮಿನಲ್ಲೂ ಇದೆ.

ಪ್ರಭುತ್ವದ ಕುಮ್ಮಕ್ಕಿನಿಂದ ಮೇಲೇಳುವ ಯಾವುದೇ ವಿಗ್ರಹ ಮತ್ತು ಇಮಾರತುಗಳು, ಅಧಿಕಾರಸ್ಥರ ನಂಬಿಕೆ ಬದಲಾದಂತೆ ರೂಪಾಂತರಕ್ಕೆ ಈಡಾಗುವುದು ಹೊಸ ವಿಚಾರವಲ್ಲ. ಆದರೆ ಹಿಂದಿನ ಧರ್ಮಗಳ ಕುರುಹುಗಳನ್ನು ನಿವಾರಿಸುವ ಮತ್ತು ಹೊಸಧರ್ಮದ ಚಿಹ್ನೆಗಳನ್ನು ಅಳವಡಿಸುವ ಕಾರ್ಯವು ಕೆಲವು ವಿಚಿತ್ರ ವೈರುಧ್ಯಗಳನ್ನು ಉಳಿಸುತ್ತದೆ. ಉದಾ: ಕ್ರೊಶಿಯಾದ ಸ್ಥಳೀಯ ದೊರೆಗಳು ತಮ್ಮ ವಿಲಾಸ ಪ್ರದರ್ಶನಕ್ಕಾಗಿ ಈಜಿಪ್ಟಿನಿಂದ ಮಮ್ಮಿ ಮತ್ತು ಸ್ಫಿಂಕ್ಸ್‌ಗಳನ್ನು ತರಿಸಿ, ಅರಮನೆ–ಮಂದಿರಗಳನ್ನು ಅಲಂಕರಿಸಿದ್ದರು. ಕ್ರೈಸ್ತವು ರೋಮ್ ಚಕ್ರಾಧಿಪತ್ಯದ ರಾಜಧರ್ಮವಾದೊಡನೆ ಕಷ್ಟಕ್ಕೆ ಸಿಲುಕಿದರು. ಬೆಲೆಬಾಳುವ ಶಿಲ್ಪಗಳನ್ನು ಇಟ್ಟುಕೊಳ್ಳುವಂತಿಲ್ಲ, ಎಸೆಯುವಂತಿಲ್ಲ. ಇದಕ್ಕಾಗಿ ಅವರು ಕಂಡುಕೊಂಡ ಉಪಾಯವೆಂದರೆ, ಚರ್ಚಿನ ಪ್ರಾರ್ಥನೆಯ ಸಮಯದಲ್ಲಿ ಅವನ್ನು ಪರದೆಯಿಂದ ಮುಚ್ಚುವುದು. ಅಡವಿಯಲ್ಲಿ ನಿರ್ಭೀತಿಯಿಂದ ಬದುಕುವ ಸಿಂಹವು ಹೊಸಧರ್ಮಕ್ಕಂಜಿ ಪರದೆಯೊಳಗೆ ಅಡಗಬೇಕಾಯಿತು.

ಪ್ರಾಚೀನ ನಗರಗಳು ಚರಿತ್ರೆಯ ಭಾರವನ್ನು ತಮ್ಮದೇ ಪರಿಯಲ್ಲಿ ಕೆಳಗಿಳಿಸಲು ಬಯಸುತ್ತವೆ. ಇಟಲಿಯು ತನ್ನ ಐತಿಹಾಸಿಕ ಸ್ಮಾರಕಗಳನ್ನೇ ಬಂಡವಾಳ ಮಾಡಿಕೊಂಡು ಆಧುನಿಕ ಪ್ರವಾಸೋದ್ಯಮವನ್ನು ಕಟ್ಟುತ್ತಿದೆ. ರೋಮಿನ ಮಣ್ಣಿನಬಣ್ಣದ ಪ್ರಾಚೀನ ಕಟ್ಟಡಗಳ ಏಕತಾನತೆಯನ್ನು ಮುರಿಯುವಂತೆ, ಅವುಗಳ ನಡುವಿಂದ ಆಧುನಿಕ ಕಟ್ಟಡಗಳು ಏಳುತ್ತಿವೆ; ಸ್ಮಾರಕಗಳ ನಡುವೆ ಗಿಳಿಹಸಿರಿನ ಮ್ಯಾಪಲ್ ಮರಗಳು ಬೆಳೆಯುತ್ತಿವೆ. ಬಸ್ಸು–ರೈಲುಗಳ ನಿಲ್ದಾಣವಾದ ರೋಮಾ ಟರ್ಮಿನಿಯು – ವಲಸಿಗರು, ಭಿಕ್ಷುಕರು, ನಿರಾಶ್ರಿತರು, ಕಸಮುಸುರೆ, ಟೂರಿಸ್ಟ್ ಗೈಡುಗಳು, ಬಸ್ಸುಕಾರುಗಳ ಹರಿದಾಟ ಸಮೇತ ಬೆಂಗಳೂರಿನ ಮೆಜೆಸ್ಟಿಕ್ಕಿನಂತಾಗಿದೆ. ವ್ಯಾಟಿಕನಿನಲ್ಲಿ ಕ್ರಿಸ್ತನ ಕರುಣೆಯನ್ನು ನಮಗೂ ತುಸು ಹಣಿಸಿ ಎಂಬ ಆರ್ತಭಾವದಲ್ಲಿ, ಮೊಣಕಾಲ ಮೇಲೆ ಕೂತು ನೆಲಕ್ಕೆ ಹಣೆ ಹತ್ತಿಸಿದ ಭಿಕ್ಷುಕರು



ರೋಮ್ ಹಾಗೂ ವ್ಯಾಟಿಕನ್ ನಗರಗಳನ್ನು ಬೇರ್ಪಡಿಸುವ ಡ್ಯಾನುಬ್ ಹೊಳೆ